OS No.11/2024

DW-5

**(ಇಂದು ದಿಃ 09-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.TVP ವಕೀಲರಿಂದಃ-**

ನಾನು ಸಟಪಟನಹಳ್ಳಿಯಲ್ಲಿ ವಾಸವಿದ್ದೇನೆ. ಸಟಪಟನಹಳ್ಳಿಯಿಂದ ಸೇಡಂ ಸುಮಾರು 10 ಕೀ.ಮೀಟರ್ ದೂರ ಇದೆ ಎಂದರೆ ಸರಿ. ನಾನು ಸಟಪಟನಹಳ್ಳಿಯಿಂದ ಸೇಡಂಗೆ ಪ್ರತಿ ದಿನ ಬರುತ್ತಿದ್ದೆ. ವಾದಿ ತಾಯಿ ಬಿದ್ದು ಗಾಯ ಮಾಡಿಕೊಂಡಿದ್ದರು ಅವರಿಗೆ ಕುಳಿತುಕೊಳ್ಳಲು ನಿಲ್ಲಿಲು ಮತ್ತು ನಡೆಯಲು ಆಗುತ್ತಿರಲಿಲ್ಲ ಎಂದರೆ ಸರಿ. ಬೆಳಿಗ್ಗೆಯಿಂದ ಸಂಜೆಯವರೆಗೆ ಅವರ ಸೇವೆ ಮಾಡಬೇಕು ಎಂದರೆ ಸರಿ. ಪ್ರತಿವಾಯರು ಎಲ್ಲರು ಒಂದೇ ವಟಾರದಲ್ಲಿ ವಾಸವಿದ್ದಾರೆ ಎಂದರೆ ಸರಿ. 1 ಮತ್ತು 5 ನೇ ಪ್ರತಿವಾದಿಯರು ಮಾತ್ರ ಅವರ ತಾಯಿಯ ವ್ಯವಸ್ಥ ೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಪ್ರತಿವಾದಿಯರು ಮತ್ತು ಅವರ ಹೆಂಡತಿಯರು ವಾದಿಯ ತಾಯಿಯ ಸೇವೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನನ್ನು ಅವರ ತಾಯಿ ಸೇವೆ ಮಾಡಲು ಕೆಲಸಕ್ಕೆ ಇಟ್ಟುಕೊಂಡಿದ್ದರ ು ಮತ್ತು ನನಗೆ ತಿಂಗಳಿಗೆ 800/- ರೂಪಾಯಿ ಕೂಲಿ ಕೋಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 5 ನೇ ಪ್ರತಿವಾದಿಯರು ನಾಗಮಣಿಯರವರ ಸೇವೆ ಮಾಡುತ್ತಿದ್ದರು ಕಾರಣ ನಾಗಮಣಿ ಅವಳ ಸ್ವಂತ ಆಸ್ತಿಯನ್ನು 1 ಮತ್ತು 5 ನೇ ಪ್ರತಿವಾದಿಯರಿಗೆ ದಾನ ಮಾಡಿದ್ದೇನೆ ಎಂದು ನಾಗಮಣಿ ನನಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗಮಣಿ ಆ ರೀತಿ ನನ್ನ ಬಳಿ ಹೇಳುವ ಯಾವುದೇ ಪ್ರಸಂಗ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾಗಮಣಿಗೆ ಸರಿಯಾಗಿ ಪ್ರಜ್ಞೆ ಇತ್ತು ಮತ್ತು ಅವಳ ಮಾನಸಿಕ ಆರೋಗ್ಯ ಚೆನ್ನಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಿಭಾಗ ಮಾಡಿಕೊಂಡ ಬಗ್ಗೆ ನನಗೆ

OS No.11/2024

DW-5

ವೈಯಕ್ತಿಕ ಮಾಹಿತಿ ಇಲ್ಲ, ನಾನು ಯಾವತ್ತು ನಾಗಮಣಿಯ ಸೇವೆಗೆ ಹೋಗಿಲ್ಲ ಮತ್ತು ನನಗೆ ವಾದಿ ಮತ್ತು ಪ್ರತಿವಾದಿಯರ ಮನೆಯ ಬಗ್ಗೆ ವೈಯಕ್ತಿಕವಾಗಿ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ 1 ಮತ್ತು 5 ನೇ ಪ್ರತಿವಾದಿಯರ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**